# IN THE COURT OF THE ADDL. SENIOR CIVIL JUDGE & JMFC., GUBBI

# **OS – 212/2022**

Witness present and duly sworn on : 02.12.2024.

Cross Examination: by Counsel for Plaintiffs :

ನಾನು ನಾಗಸಂದ್ರ ನಿವಾಸಿ. ನನ್ನ ಹುಟ್ಟಿನಿಂದಲೂ ನಾಗಸಂದ್ರದಲ್ಲಿ ವಾಸ ಇದ್ದೇನೆ. ನಾನು ವ್ಯವಸಾಯ ಕೆಲಸ ಮಾಡುತ್ತೇನೆ. ನನಗೆ ಸುಮಾರಾಗಿ ಓದಲು ಮತ್ತು ಬರೆಯಲು ಬರುತ್ತದೆ. ನಾನು 7 ನೇ ಯ ತರಗತಿಯವರೆಗೆ ಓದಿದ್ದೇನೆ. ಮಾದಯ್ಯ @ ಮೂಡ್ಲಯ್ಯನವರಿಗೆ 4 ಜನ ಮಕ್ಕಳು. ಅವರುಗಳು ಗೋವಿಂದಪ್ಪ, ವೆಂಕಟನರಸಯ್ಯ, ಕೆಂಪಣ್ಣ, ನರಸಪ್ಪ. ಸದರಿ ಗೋವಿಂದಯ್ಯನವರ ಹೆಂಡತಿ ನಿಂಗಮ್ಮ, ಅವರು ನನ್ನ ತಾಯಿ. ವೆಂಟಕನರಸಯ್ಯನವರಿಗೆ ನರಸಿಂಹಯ್ಯ, ರಾಮಣ್ಣ, ಹೆಣ್ಣು ಮಕ್ಕಳು ಪುಟ್ಟಮ್ಮ, ಪುಟ್ಟನರಸಮ್ಮ ಮತ್ತು ಮಂಗಳಮ್ಮ ಎಂಬ ಮಕ್ಕಳು. ಹೆಣ್ಣು ಮಕ್ಕಳು ಶಿವಗಂಗೆ, ಬಿದರಿಕಟ್ಟೆ ಊರಿಗೆ ಮದುವೆ ಮಾಡಿ ಕೊಟ್ಟಿದ್ದೇವೆ. ಈಗ ಎಲ್ಲರೂ ನಾಗಸಂದ್ರದಲ್ಲಿ ವಾಸ ಇದ್ದಾರೆ ಎಂದರೆ ಪುಟ್ಟಮ್ಮ ರವರು ನಾಗಸಂದ್ರದಲ್ಲಿ ವಾಸ ಇದ್ದಾರೆ. ನನ್ನ ತಾಯಿಯ ಮರಣದ ದಿನಾಂಕ ನನಗೆ ಗೊತ್ತಿಲ್ಲ. ಸುಮಾರು 10-12 ವರ್ಷಗಳ ಹಿಂದೆ ಅವರು ಮರಣ ಹೊಂದಿದ್ದಾರೆ.

ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ನಾನೇ ವಕೀಲರು ಬರೆದಿರುತ್ತಾರೆ. ನಾನು ಅದನ್ನು ಓದಿರುವುದಿಲ್ಲ. ಅವರು ಸಹಿ ಮಾಡಲು ಹೇಳಿದಕ್ಕೆ ಸಹಿ ಮಾಡಿರುತ್ತೇನೆಂದರೆ ಓದಿ ಸಹಿ ಮಾಡಿರುತ್ತೇನೆ. 2006 ರಲ್ಲಿ ವಿಭಾಗ ಮಾಡಿಕೊಂಡಿರುತ್ತಾರೆ. ದಿನಾಂಕ ನನಗೆ ಗೊತ್ತಿಲ್ಲ. ಯಾರ್ಯಾರ ನಡುವೆ ವಿಭಾಗ ಆಗಿರುವುದನ್ನು ನೋಡಿದ್ದಿರಾ ಎಂದರೆ ನರಸಿಂಹಯ್ಯ ಮತ್ತು ರಾಮಣ್ಣ ಮಾಡಿಕೊಂಡಿರುತ್ತಾರೆ. ಹೆಣ್ಣು ಮಕ್ಕಳಾದ ಪುಟ್ಟಮ್ಮ, ಪುಟ್ಟನರಸಮ್ಮ ಮತ್ತು ಮಂಗಳಮ್ಮ ಸದರಿ ವಿಭಾಗದಲ್ಲಿ ಪಕ್ಷಗಾರರಾಗಿರುವುದಿಲ್ಲ. ನಾನು ಪಂಚಾಯ್ತಿ ಪಾರಿಕತ್ ನೋಡಿರುವುದಿಲ್ಲ. ಆದ ಕಾರಣ ನನಗೆ ಸಂಪೂರ್ವ ಮಾಹಿತಿ ಇಲ್ಲ ಎಂದರೆ ಸರಿ, ಸಾಕ್ಷಿ ಮುಂದುವರೆದು ಮಾರಿರುವುದು ಗೊತ್ತಿದೆ.

ದಾವಾ ಆಸ್ತಿಗಳು ವೆಂಕಟನರಸಯ್ಯನವರ ಒಟ್ಟು ಕುಟುಂಬದ ಸ್ವತ್ತು ಮತ್ತು ಹೆಣ್ಣು ಮಕ್ಕಳಿಗೆ ಭಾಗ ಕೊಡುವುದನ್ನು ತಪ್ಪಿಸಲು ಸುಳ್ಳು ದಾಖಲೆ ಪಾರಿಕತ್ತು ಮಾಡಿಕೊಂಡಿದ್ದಾರೆ ಎಂದರೆ ಮುಂಚೆ ಒಟ್ಟಿಗೆ ವ್ಯವಸಾಯ ಮಾಡುತ್ತಿದ್ದ, ಇತ್ತಿಚೇಗೆ ದಾಖಲೆಯನ್ನು ಮಾಡಿಕೊಂಡಿರುತ್ತಾರೆ. ಈಗಲೂ ಸಹ ಅವರೆಲ್ಲರೂ ಒಟ್ಟು ಕುಟುಂಬದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಬೋರಯ್ಯ ಮತ್ತು ಸುರೇಶ್ ರವರಿಗೆ ವೆಂಕಟನರಸಯ್ಯನವರಿಗೆ ಹೆಣ್ಣು ಮಕ್ಕಳು ಇರುವ ವಿಷಯ ಗೊತ್ತಿತ್ತು ಎಂದರೆ ಬೋರಯ್ಯನವರು ಬೆಂಗಳೂರಿನಲ್ಲಿ ಇದ್ದ ಕಾರಣ ಗೊತ್ತಿರಲಿಲ್ಲ. ಬೋರಯ್ಯನವರು ಈಗ ನಾಗಸಂದ್ರದಲ್ಲಿ ವಾಸ ಇದ್ದಾರೆ ಎಂದರೆ ಸರಿ. ಸುಮಾರು 7-8 ವರ್ಷದಿಂದ ಅವರು ನಾಗಸಂದ್ರದಲ್ಲಿ ವಾಸ ಇದ್ದಾರೆ. ಸುರೇಶ್ ರವರು ಮುಂಚೆ ನಾಗಸಂದ್ರ ವಾಸಿ ಎ ಂದರೆ ಸರಿಯಲ್ಲ. ಅವರು ಬೆಂಗಳೂರಿನಲ್ಲಿ ವಾಸ ಇದ್ದಾರೆ. ಬೋರಯ್ಯನವರಿಗೆ ಮುಂಚಿನಿಂದಲೂ ಪಿತ್ರಾರ್ಜಿತವಾದ ಆಸ್ತಿ ನಾಗಸಂದ್ರದಲ್ಲಿ ಇತ್ತು ಎಂದರೆ ಸರಿ. ಅವರ ಆಸ್ತಿ ದಾವಾ ಆಸ್ತಿಗಳು ಅಕ್ಕ ಪಕ್ಕದಲ್ಲಿ ಇತ್ತು ಎಂದರೆ ಸರಿ. ಆದ ಕಾರಣ ವೆಂಕಟನರಸಯ್ಯನವರಿಗೆ ಹೆಣ್ಣು ಮಕ್ಕಳು ಇರುವ ವಿಷಯ ಬೋರಯ್ಯನವರಿಗೆ ಗೊತ್ತಿತ್ತು ಎಂದರೆ ನನಗೆ ಗೊತ್ತಿಲ್ಲ. ಆದರೂ ಸಹ ಹೆಣ್ಣು ಮಕ್ಕಳಿಗೆ ಮೋಸ ಮಾಡಲು ಕ್ರಯಪತ್ರವನ್ನು ಸೃಷ್ಟಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನರಸಿಂಹಯ್ಯನವರ ಮಕ್ಕಳು ಬೋರಯ್ಯ ಮತ್ತು ಸುರೇಶ್ ರವರ ದಾಖಲೆಗೆ ಸಹಿ ಮಾಡಿರುತ್ತಾರೆ. ಸದರಿ ಕ್ರಯಪತ್ರಗಳಿಗೆ ಪುಟ್ಟಮ್ಮ, ಪುಟ್ಟ ನರಸಮ್ಮ ಮತ್ತು ಮಂಗಳಮ್ಮ ಸಹಿ ಮಾಡಿಲ್ಲ ಎಂದರೆ ನನಗೆ ಗೊತ್ತಿಲ್ಲ. ನನಗೆ ಯಾವುದೇ ವಿಚಾರ ಗೊತ್ತಿಲ್ಲದೆ ಇದ್ದರು ಸಹ ಪ್ರತಿವಾದಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**Re examination - Nil**

(Typed to my dictation in open court)

R.O.I & A.C.

Addl. Senior Civil Judge and
JMFC., Gubbi